

**ಮದುವೆ ಮುಂಜಿಗಳಂತಹ ಶುಭ ಸಮಾರಂಭಗಳಿಗಾಗಿ ಮುಂಚಿನ ದಿನ ಮನೆಗಳಲ್ಲಿ ಮೆಹಂದಿ ಸಂಭ್ರಮ. ಇದು ಪಾರಂಪರಿಕ ಆಚರಣೆಯಾದರೂ ಇಂದು ಮೆಹಂದಿ ಆಧುನಿಕತೆಯೊಂದಿಗೆ ತಳಕು ಹಾಕಿಕೊಂಡಿದೆ. ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ ಎಡತಾಕಿದ್ದು, ಇಂದಿನ ಕಾಲಮಾನಕ್ಕೆ ತಕ್ಕಂತೆ ಮೆಹಂದಿ ವಿನ್ಯಾಸಗಳು ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿವೆ.**

■ **ಸುಮವೀಣಾ ಹಾಸನ**

# ಮೆಹಂದಿ

## ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ!

ಭಾರತೀಯರ ಮಂಗಳಕರ ಸಂಸ್ಕೃತಿಯ ಆಚರಣೆಗಳಲ್ಲಿ ಮೆಹಂದಿಯೂ ಒಂದು. ಮೆಹಂದಿ ಒಂದು ದೃಶ್ಯ ಕಲೆ. ವಯೋಭೇದವಿಲ್ಲದೆ ಪ್ರತಿಯೊಬ್ಬ ಹೆಣ್ಣು ಮಕ್ಕಳು ಹಾಕಿಕೊಳ್ಳಲು ಇಷ್ಟಪಡುವ ಕಲೆ. ಹಳೆಯ ಸಂಪ್ರದಾಯ ಎಂದು ಮೂಗು ಮುರಿಯುವ ಈ ಕಾಲದಲ್ಲೂ ಮೆಹಂದಿ ಹಿಂದೆಂದಿಗಿಂತಲೂ ತನ್ನ ಪ್ರಾಮುಖ್ಯತೆಯನ್ನು ಹಾಗೇ ಉಳಿಸಿಕೊಂಡಿದೆ. ಸಾಂಪ್ರದಾಯಿಕ ಆರೋಗ್ಯ ಹಾಗೂ ಅಲಂಕಾರದ ಹಿನ್ನೆಲೆಯಿಂದ ಇದು ಭಾರತೀಯರ ಕಲೆಗಳ ಒಂದು ಭಾಗವಾಗಿದೆ.

ಗೋರಂಟಿ, ಮಧುರಂಗಿ, ಹೆನ್ನಾ ಮುಂತಾದ ಹೆಸರುಗಳಿಂದಲೂ ಕರೆಸಿಕೊಳ್ಳುವ ಮೆಹಂದಿ ಮೂಲತಃ 'ಮೆಂಧಿಕಾ' ಶಬ್ದದಿಂದ ಬಂದಿದೆ. ಮೆಹಂದಿ ಪುಡಿ ಹಾಗೂ ಅರಿಶಿನವನ್ನು ಮಿಶ್ರಮಾಡಿ ಬಳಸುವ ಬಗ್ಗೆ ಪುರಾತನ ಕಾಲದ ವೇದಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಮೆಹಂದಿಯ ತವರು ಅರಬ್ ಮತ್ತು ಪರ್ಷಿಯಾ. ಮೆಹಂದಿ ಲೈಥ್ರೇಸಿ ಕುಟುಂಬಕ್ಕೆ ಸೇರಿದೆ. ಮದುರಂಗಿ ತಳಿಗಳಲ್ಲಿ ಬಿಳಿ, ಕೆಂಪು, ನೀಲಿ ಹೂ ಬಿಡುವ ಮಾದರಿಗಳಿವೆ. ಇದರ ಎಲೆ, ಹೂ, ತೊಗಟೆ, ಬೇರು, ಬೀಜಗಳು ಔಷಧಯುಕ್ತವಾಗಿವೆ. ಇದರ ಬಿಳಿ ಹಾಗೂ ತಿಳಿ ಗುಲಾಬಿ ಹೂಗಳಿಗೆ ಸುವಾಸನೆಯೂ ಇರುತ್ತದೆ.

ಭಾರತದಲ್ಲಿ ಗುಜರಾತ್, ರಾಜಸ್ಥಾನ, ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶಗಳಲ್ಲಿ ಇದಕ್ಕೆ ಪ್ರಾಶಸ್ತ್ಯವಿದೆ. ಮೆಹಂದಿ ಸೊಪ್ಪನ್ನು ನಿಂಬೆರಸ, ಕಾಚು, ಎಲೆ, ಸುಣ್ಣದೊಂದಿಗೆ ಒರಳಲ್ಲಿ ರುಬ್ಬಿ, ಕಲ್ಲಲ್ಲಿ ಅರೆದು ಹಚ್ಚಿಕೊಳ್ಳುವ ಕಾಲವಿತ್ತು. ಆದರೆ ಈಗ ಮೆಹಂದಿ ಸೊಪ್ಪನ್ನು ಒಣಗಿಸಿ ಪುಡಿ ಮಾಡಿ ನಿಂಬೆ ರಸ ಸೇರಿಸಿ ಚಿತ್ರ ಚಿತ್ತಾರ ಬಿಡಿಸಿಕೊಳ್ಳುತ್ತಾರೆ.

ಮದುವೆ, ಹಬ್ಬ ಇತ್ಯಾದಿ ಶುಭ ಸಮಾರಂಭಗಳಲ್ಲಿ ಬ್ರೈಡಲ್, ಇಂಡಿಯನ್, ಅರೆಬಿಕ್, ಮೊಘಲ್, ಮಲ್ಟಿಕಲರ್‌ಗಳಲ್ಲಿ ಇದನ್ನು ಬಳಸುತ್ತಾರೆ. ಮೆಹಂದಿ ಹಾಕಲು ಹಿಂದೆ ಕಡ್ಡಿಗಳನ್ನು ಬಳಸುತ್ತಿದ್ದರು. ಈಗ ಕೋನ್‌ಗಳು ಬಂದಿವೆ. ಮತ್ತೂ ಮುಂದುವರೆದಂತೆ ಸ್ಟೋನ್ ಚಿಮುಕಿಸಿ ವರ್ಕ್ ಸೇರಿಸಿಕೊಂಡು ಮೆಹಂದಿ ಆರ್ಟ್ ಕೂಡ ಮಾಡುತ್ತಾರೆ. ದಪ್ಪ ಎಳೆಯ ಮೆಹಂದಿ ಬಣ್ಣ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಈಗ ತೆಳು ಎಳೆಯ ಮೆಹಂದಿಯೇ ಇರುವುದು.

ಮೆಹಂದಿ ಒಣಗುವ ಹಂತಕ್ಕೆ ಬಂದಾಗ ಸಕ್ಕರೆ ಮತ್ತು ಲಿಂಬೆ ಹಣ್ಣಿನ ರಸ ಹಾಕಿದರೆ ಬಣ್ಣ ಗಾಢವಾಗುತ್ತದೆ. ಕೈಗೆ ಹಾಕುವ ಮೆಹಂದಿ ಪುಡಿ ಉದುರಿದ ಬಳಿಕ ತೆಂಗಿನ ಎಣ್ಣೆ, ನೀಲಗಿರಿ ಮಿಕ್ಸ್ ಹಾಕುವುದರಿಂದ ಬಣ್ಣ ಮತ್ತಷ್ಟು